ನಮ್ಮ ಜನರ ಭಾಷೆ, ನಮ್ಮ ಜನರ ನಂಬಿಕೆ, ನಮ್ಮ ಜನರ ಆವರಣ ಅಂತ ಹೆಚ್ಚು ಪ್ರಾಶಸ್ತ್ಯ ಕೊಡಬಾರದು. ನಮ್ಮ ಜನರ ಪರವಾಗಿ ನಾವು ಯಾವುದೇ ಆಯ್ಕೆ ಮಾಡಬಾರದು. ಹೀಗೆ ಮಾಡಿ ಜನರನ್ನ ಓಲೈಸಬಹುದು ಅನ್ನೋದು ನನ್ನಂಥವನಿಗಂತೂ ಆಯ್ಕೆಯಲ್ಲ. ಯಾಕೆಂದರೆ ಚುನಾವಣೆಗೆ ನಿಲ್ಲುವವನಲ್ಲ. ಜನರಿಗೆ ನಾನು ಉತ್ತರದಾಯಿಯೂ ಅಲ್ಲ. ಹಾಗಾಗಿ ಜನರ ಪರವಾಗಿ ಅವರಿಗೆ ಇಂಥದ್ದು ಬೇಕು ಅನ್ನುವಂಥ ಆಯ್ಕೆಯನ್ನು ನಾನ್ಯಾಕೆ ಮಾಡಬೇಕು? ನಮ್ಮ ಬಹುಪಾಲು ಜನ ಧಾರ್ಮಿಕರು. ಅವರಲ್ಲಿ ಮತೀಯದ್ವೇಷವಿಲ್ಲ. ಅಂಥವರ ಜತೆ ನಾಸ್ತಿಕರಾಗಿ ಬದುಕುವವರೂ ಅದನ್ನು ಗೌರವಿಸಬೇಕು. ಇಂಥ ಧಾರ್ಮಿಕತೆಯ ಮೂಲಕ ಧರ್ಮಗಳ ಕೇಡನ್ನು ಮುಖಾಮುಖಿ ಮಾಡುವ ಪ್ರಯೋಗವನ್ನು ಯಾಕೆ ಮಾಡಬಾರದು? 'ಅಳಿದ ಮೇಲೆ'ಯಲ್ಲಿ ಇರುವುದು ಇದೇ ಮೌಲ್ಯವಲ್ಲವಾ?

ಕಾರಂತರು ಪ್ರತಿಯೊಬ್ಬ ವ್ಯಕ್ತಿಯ ಸ್ವಾಯತ್ತತೆಯನ್ನು ಗೌರವಿಸ್ತಾರೆ. ಆ ಮುದುಕಿಯದೊಂದು ನಂಬಿಕೆಯಿದೆ. ಅದು ನನಗೆ ಒಪ್ಪಿಗೆಯಲ್ಲ. ಆದರೆ ಅವಳ ನಂಬಿಕೆಯನ್ನ ನಾನು ಗೌರವಿಸ್ತೀನಿ. ಅದಕ್ಕಿಂತ ಹೆಚ್ಚಾಗಿ ಅವಳಿಗೆ ಆ ನಂಬಿಕೆಯನ್ನು ಇಟ್ಟಕೊಳ್ಳೋ ಹಕ್ಕನ್ನ ಮನ್ನಿಸ್ತೀನಿ. ಅವಳ ಸ್ವಾಯತ್ತತೆಯನ್ನು ಗುರುತಿಸೋದು ಮತ್ತು ಅವಳ ಹಾಗೆ ನಾವು ವರ್ತಿಸೋದು ಅಥವಾ ಅವಳನ್ನ ಒಲಿಸಿಕೊಳ್ಳೋದು, ಎರಡೂ ಬೇರೆ. ಸ್ವಾಯತ್ತತೆ ಅನ್ನೋದು ಇನ್ನೊಬ್ಬರ ಪರವಾಗಿ ನಾವು ಆಯ್ಕೆ ಮಾಡೋದಲ್ಲ.

◆ **ಹಾಗಿದ್ದರೆ ಬಾಬಾಬುಡನಗಿರಿಯ ಪರಂಪರೆಯನ್ನು ರಕ್ಷಿಸುವ ಹೋರಾಟದ ಅರ್ಥವೇನು?**

ಬಾಬಾಬುಡನಗಿರಿ ಒಂದು ಸಮುದಾಯವು ತನ್ನ ಸ್ವಾತಂತ್ರ್ಯದಲ್ಲಿ ಮಾಡಿಕೊಂಡಿರೋ ಆಯ್ಕೆ. ಹಿಂದುತ್ವವಾದಿಗಳು ಆ ಸ್ವಾತಂತ್ರ್ಯವನ್ನು ಕಸಕೋತಿದಾರೆ. ನನ್ನ ಬಾಲ್ಯ ಕಳೆದಿದ್ದು ಚಿಕ್ಕಮಗಳೂರಲ್ಲಿ. ನನ್ನಮ್ಮ ಭಾಳ ಸಂಪ್ರದಾಯಸ್ಥ ಬ್ರಾಹ್ಮಣ ಹೆಂಗಸು, ಹರಕೆ ಹೊತ್ಕೊಂಡು ಬಾಬಾಬುಡನಗಿರಿಗೆ ಕರಕೊಂಡು ಹೋಗಿರೋದು ಈಗಲೂ ನೆನಪಿದೆ. ನನಗೆ ನನ್ನಮ್ಮನ ಹರಕೆಯಲ್ಲೂ ನಂಬಿಕೆಯಿಲ್ಲ; ಬಾಬಾಬುಡನಗಿರಿಯ ಧಾರ್ಮಿಕತೆಯಲ್ಲೂ ನಂಬಿಕೆಯಿಲ್ಲ. ಆದರೆ ಅದನ್ನು ನಂಬುವವರ ಅಟಾನಮಿಯನ್ನು ನಾನು ಪ್ರಶ್ನೆ ಮಾಡೋದಿಲ್ಲ.

◆ **ಕೊನೆಗೂ ಉಳಿವ ಪ್ರಶ್ನೆಯೆಂದರೆ, ನಮ್ಮ ಕಾಲದಲ್ಲಿ ಧರ್ಮದ ಹೆಸರಲ್ಲಿ ಹುಟ್ಟಿರುವ ಕೇಡನ್ನು ಹೇಗೆ ಮುಖಾಮುಖಿ ಮಾಡಬೇಕು ಅನ್ನೋದು.**

ಹೇಗೆ ಅಂತ ನನಗೂ ಗೊತ್ತಿಲ್ಲ. ಆದರೆ ನಾವು ಕೊಟ್ಟುಕೊಂಡಿರೋ ಈ ಉತ್ತರಗಳ ಬಗ್ಗೆ ನನಗೆ ಅಸಮಾಧಾನ ಇದೆ. ನಮ್ಮ ಆ ಕ್ರಿಯೆಗಳಿಂದ ನಮಗೇನಾಗುತ್ತೆ ಅಂತಲೂ ನನಗೆ ಗೊತ್ತಿಲ್ಲ. ಸುಮಾರು ಜನ ನನಗೆ ಹೇಳಿದಾರೆ, ನಿಮ್ಮ ಕೋಮುಸೌಹಾರ್ದ ವೇದಿಕೆಯಿಂದಲೂ ಕರಾವಳಿಯಲ್ಲಿ ಈ ತರಹದ ಧ್ರುವೀಕರಣ ಆಗಿದೆ ಅಂತ. ಹಾಗಿದ್ದರೆ ಅದಕ್ಕೆ ಪರ್ಯಾಯ ಯಾವುದು? ಈ ಹಿಂಸೆಯನ್ನ ಪ್ರತಿಭಟನೆ ಮಾಡದೆ ಒಪ್ಪಿಕೊಳ್ಳೋದ? ಇಷ್ಟಕ್ಕೂ ನಾವು ಮಾಡುವ ಪ್ರತಿಭಟನೆ ಎಂಥದ್ದು? ಸಾಂಕೇತಿಕ. ಇಡೀ ಜನಸಮುದಾಯದ ಹೆಸರಲ್ಲಿ ಮೂರುನಾಲ್ಕು ಜನ ನಿಂತ್ಕೊಂಡು ಅದೇ ಮೂರುನಾಲ್ಕು ಜನರಿಗೆ ಭಾಷಣ ಬಿಗಿಯೋದು. ಇಷ್ಟನ್ನೂ ಮಾಡದೆ ಇದ್ದರೆ ಹೇಗೆ?

◆ **ಪ್ರಸನ್ನ ಅವರು ಈ ದಿಕ್ಕಲ್ಲಿ ಮಾಡ್ತಿರೊ ಪ್ರಯೋಗ ಹೇಗಿದೆ?**

ನನಗೇನೊ ಅದು ಕನ್ವಿನ್ಸ್ ಆಗಿಲ್ಲ. ಅದರಲ್ಲಿ ಬಹಳ ಸಾಧ್ಯತೆಗಳಿಲ್ಲ. ನಾವೇ ಒಂದು ಕಾರ್ಯಕ್ರಮ ಏರ್ಪಡಿಸಿದ್ದೀವಿ. ಅದರಲ್ಲಿ ಪ್ರಸನ್ನ ರಾಮಾಯಣದ ಬಗ್ಗೆ ಮಾತಾಡಿದರು. ಆದರೆ